

بِسۡمِ اللّٰہِ الرَّحۡمٰنِ الرَّحِیۡمِ

# ಜಲ್ಸ ಸಾಲಾನ ಕೆನಡ – ಅಲ್ಲಾಹನ ಸಹಾಯ ವರ್ಷ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಕೆನಡದ ಟೊರೋಂಟೋದ ಬೈತುಲ್ ಇಸ್ಲಾಂ ಮಸ್ಜಿದ್‌ನಿಂದ **14–10–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಕೆನಡದ ಅಹ್ಮದಿಯಾ ಜಮಾಅತಿನ ಜಲ್ಸ ಸಾಲಾನ ಕಳೆದ ವಾರ ಜರಗಿತು. ಅಲ್ಲಾಹನ ಅನುಗ್ರಹಗಳನ್ನು ಪ್ರಕಟಿಸುತ್ತಾ ಅದು ಮುಗಿತಾಯವಾಯಿತು. ಅದರ ಬಗ್ಗೆ ನಾವು ಅಲ್ಲಾಹನಿಗೆ ಎಷ್ಟು ಕೃತಜ್ಞತೆ ಅರ್ಪಿಸಿದರೂ ಕಡಿಮೆಯೇ ಆಗುತ್ತದೆ. ನಾವು ಸೀಮಿತವಾದ ಸಾಧನ ಸಂಪತ್ತನ್ನು ಹೊಂದಿದವರಾದರೂ ಲೋಕದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಜಲ್ಸವನ್ನು ಜರಗಿಸಲು ನಮಗೆ ಅಲ್ಲಾಹನೇ ಭಾಗ್ಯ ನೀಡುತ್ತಿದ್ದಾನೆ. ಅಲ್ಲಾಹನ ಅನುಗ್ರಹದಿಂದ ನಮ್ಮ ವ್ಯವಸ್ಥೆಗಳು ಸಾಮಾನ್ಯವಾಗಿ ಉತ್ತಮವೇ ಆಗಿರುತ್ತದೆ.

ಜಲ್ಸದ ಮೂರು ದಿನಗಳಲ್ಲಿ ಕಾರ್ಯನಿರತರಾಗುವವರ ಮನಸ್ಸಿನಿಂದ ಲೌಕಿಕವಾದ ಯೋಚನೆಗಳು ಸಂಪೂರ್ಣವಾಗಿ ಅದೃಶ್ಯವಾಗುತ್ತವೆ. ಜಲ್ಸದಲ್ಲಿ ನಿಸ್ವಾರ್ಥತೆಯಿಂದ ಕೆಲಸ ಮಾಡುವುದರ ಬಗ್ಗೆ ಮಾತ್ರವೇ ಎಲ್ಲ ಕಾರ್ಯಕರ್ತರು ಯೋಚಿಸುತ್ತಾರೆ. ಅವರು ಸ್ವಯಂ ಸೇವೆಗೆ ತಮ್ಮನ್ನು ಅರ್ಪಿಸಿರುತ್ತಾರೆ. ಈ ಕಾರ್ಯಕರ್ತರಲ್ಲಿ ಈ ಭಾವನೆ ಉಂಟುಮಾಡುವವನು ಅಲ್ಲಾಹನೇ ಆಗಿದ್ದಾನೆ. ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಮಾಡಲು ಎಲ್ಲ ಯೋಚನೆಗಳಿಗಿಂತ ಮಿಗಿಲಾಗಿ ಮತ್ತು ಎಲ್ಲ ಆಶೆಗಳಿಗಿಂತ ಮಿಗಿಲಾಗಿ ನಿಮ್ಮನ್ನು ಸ್ವಯಂ ಸೇವೆಗೆ ಅರ್ಪಿಸಬೇಕು ಮತ್ತು ಕೆಲಸ ಮಾಡಬೇಕು ಎಂದು. ಕೇವಲ ಅಲ್ಲಾಹನ ಸಂಪ್ರೀತಿ ಸಂಪಾದಿಸಲು ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳ ಸೇವೆ ಮಾಡುವುದನ್ನು ನಿಮ್ಮ ದೃಷ್ಟಿಯಲ್ಲಿರಿಸಬೇಕು ಎಂಬ ಭಾವನೆ ಅಲ್ಲಾಹನು ಅವರಲ್ಲಿ ಉಂಟು ಮಾಡುತ್ತಾನೆ.

ಇಂತಹ ಸೇವಾ ಮನೋಭಾವ ಹೊಂದಿದ ಕಾರ್ಯಕರ್ತರನ್ನು ಜಮಾಅತ್‌ಗೆ ಒದಗಿಸಿರುವುದಕ್ಕೆ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅವರು ವಿದ್ಯಾವಂತರಾಗಿದ್ದರೂ ನಿಸ್ವಾರ್ಥತೆಯಿಂದ ಕೆಲಸ ಮಾಡುತ್ತಾರೆ. ಅವರೊಂದಿಗೆ ಟಾಯಿಲೆಟ್‌ಗಳನ್ನು ಸ್ವಚ್ಛಗೊಳಿಸಿರಿ ಎಂದು ಹೇಳಿದರೆ ಅವರು ಅದನ್ನು ಮಾಡಲು ಸಿದ್ಧರಾಗುತ್ತಾರೆ. ಆಹಾರ ಬೇಯಿಸಿರಿ ಎಂದು ಹೇಳಿದರೆ ಅದಕ್ಕೂ ಅವರು ಸಿದ್ಧರಾಗುತ್ತಾರೆ. ಜನರಿಗೆ ಊಟ ಬಡಿಸಿರಿ ಎಂದು ಹೇಳಿದರೆ ಅದಕ್ಕೂ ಸಿದ್ಧರಾಗುತ್ತಾರೆ. ಅವರು ಸೆಕ್ಯುರಿಟಿಯ ಡ್ಯೂಟಿ ಸಹ ಮಾಡುತ್ತಾರೆ. ಪಾರ್ಕಿಂಗ್ ವ್ಯವಸ್ಥೆಯನ್ನು ಸಹ ಮಾಡುತ್ತಾರೆ. ಇದೇ ರೀತಿ ವಿವಿಧ ವಿಭಾಗಗಳ ಕೆಲಸ ಸಹ ಮಾಡುತ್ತಾರೆ. ಮಕ್ಕಳು ಜಲ್ಸಗಾಹ್‌ಗಳಲ್ಲಿ ಮೌನವಾಗಿ ಮತ್ತು ಉತ್ಸಾಹ ಭರಿತರಾಗಿ ನೀರನ್ನು ಸರಬರಾಜು ಮಾಡುತ್ತಿರುವಾಗ ಅಹ್ಮದಿಯೇತರರಾದ ಅತಿಥಿಗಳು ಪ್ರಭಾವಿತರಾಗದೆ ಇರುವುದಿಲ್ಲ. ಅವರು ಆಶ್ಚರ್ಯದಿಂದ ಕೇಳುತ್ತಾರೆ: ನೀವು ಈ ಮಕ್ಕಳಲ್ಲಿ ಇಂತಹ ಸೇವಾ ಮನೋಭಾವ ಹೇಗೆ ಸೃಷ್ಟಿಸಿದಿರಿ ಎಂದು.

ಜಲ್ಸದಲ್ಲಿ ಭಾಗವಹಿಸಿದ ಅತಿಥಿಗಳು ಈ ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸಬೇಕಾಗಿದೆ. ಅವರಲ್ಲಿ ಕೆಲವರು ಜಲ್ಸದ ಆರಂಭದ ಮೊದಲೇ ಕೆಲಸದಲ್ಲಿ ತೊಡಗಿರುತ್ತಾರೆ. ಮತ್ತು ಜಲ್ಸ ಮುಕ್ತಾಯದ ನಂತರ ಸಹ ಕೆಲಸ ಮಾಡುತ್ತಾರೆ. ನನ್ನನ್ನು ಭೇಟಿಯಾದ ಕೆಲವು ಅತಿಥಿಗಳು ಹೇಳಿದರು: ಅವರಿಗೆ ಜಲ್ಸದಲ್ಲಿ ಕೆಲಸಮಾಡಲು ರಜೆ ದೊರಕದಿದ್ದರೆ ಅವರು ತಮ್ಮ ನೌಕರಿ ಬಿಟ್ಟು ಬಿಡಲು ಸಹ ಸಿದ್ಧರಾಗಿದ್ದರೆಂದು. ಈ ಜನರು ತಮ್ಮ ನಿದ್ರೆ ಮತ್ತು ವಿಶ್ರಾಂತಿ ಬಗ್ಗೆ ಲಕ್ಷ್ಯ ನೀಡುವುದಿಲ್ಲ. ನಾನು ಮೊತ್ತಮೊದಲು, ಅತಿಥಿಗಳಾಗಿ ಆಗಮಿಸಿ ಕಾರ್ಯಕರ್ತರಾದ ಎಲ್ಲ ಮಕ್ಕಳಿಗೂ, ಬಾಲಕ ಬಾಲಿಕೆಯರಿಗೂ ಮಹಿಳೆಯರಿಗೂ ಪುರುಷರಿಗೂ ಕೃತಜ್ಞತೆ ಅರ್ಪಿಸುತ್ತೇನೆ. ಅವರು ಸ್ವಯಂ ಸೇವಕರಾಗಿ ತಮ್ಮನ್ನು ಜಮಾಅತಿನ ಸೇವೆಗೆ ಅರ್ಪಿಸಿದರು. ಅವರು ಸೇವಾ ಮನೋಭಾವದಿಂದ ಅತ್ಯಂತ ಕೆಳ ಮಟ್ಟದ ಕೆಲಸಗಳನ್ನು ಸಂತೋಷದಿಂದಲೂ ಹೊಣೆಗಾರಿಕೆಯಿಂದಲೂ ಈಡೇರಿಸಿದರು. ಈ ಕೆಲಸ ವಾಸ್ತವಿಕವಾಗಿ ಒಂದು ಮೌನ ತಬ್ಲೀಗ್ ಆಗಿರುತ್ತದೆ. ಈ ಕಾರ್ಯಕರ್ತರು ಬಾಹ್ಯವಾಗಿ ಕೆಲಸ ಮಾಡುತ್ತಿದ್ದರೂ ವಾಸ್ತವಿಕವಾಗಿ ಅದು ಇಲ್ಲಿಗೆ ಆಗಮಿಸುವ ಅನ್ಯ ಜನರಿಗೆ ತಬ್ಲೀಗಿನ ಮಾರ್ಗವಾಗುತ್ತದೆ. ಅನೇಕ ಜನರಿಗೆ ಸನ್ಮಾರ್ಗ ಗಳಿಸುವ ಮಾರ್ಗವಾಗುತ್ತದೆ. ಅಮೇರಿಕದಿಂದ ಓರ್ವ ಬಂಗಾಳಿ ಅಹ್ಮದಿಯೇತರ ಸ್ನೇಹಿತ ಆಗಮಿಸಿದ್ದರು. ಅವರು ಬಂಗಾಳಿ ಅಹ್ಮದಿಯರೊಂದಿಗೆ ಬಂದಿದ್ದರು. ಅವರ ಹೆಸರು ಶಹೀದುರ್ರಹ್ಮಾನ್ ಎಂದಾಗಿದೆ. ಅವರು ಹೇಳುತ್ತಾರೆ: ಜಲ್ಸವನ್ನು ನೋಡಿದಾಗ ನನಗೆ ನಾನು ಇಸ್ಲಾಮಿನೆಡೆಗೆ ಮರಳಿ ಬರುತ್ತಿರುವೆನೋ ಎಂಬಂತೆ ಭಾಸವಾಯಿತು. ಜಲ್ಸ ನನ್ನ ಮೇಲೆ ಬಹಳ ಗಾಢವಾದ ಪ್ರಭಾವ ಬೀರಿದೆ ಎಂದು ಹೇಳಿದರು.. ಅವರು ಇನ್‌ಶಾಅಲ್ಲಾಹ್ ಬೇಗನೆ ಜಮಾಅತಿಗೆ ಸೇರುವರು. ಈ ರೀತಿ ಜಲ್ಸದಿಂದ ತಬ್ಲೀಗ್ ಸಹ ಆಗುತ್ತದೆ.

ಡೇಬ್ ಶೋಲ್‌ಡೇ ಇಲ್ಲಿನ ಪಾರ್ಲಿಮೆಂಟ್ ಸದಸ್ಯರಾಗಿದ್ದಾರೆ. ಅವರು ಹೇಳುತ್ತಾರೆ: ಯಾವಾಗಲೂ ಪ್ರಭಾವಿತನಾಗುವ ಹಾಗೆ ನಾನು ಇಂದು ಸಹ ಪ್ರಭಾವಿತನಾದೆನು. ಈ ಜಲ್ಸದಲ್ಲಿ ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಸೇವಕರಿದ್ದಾರೆಂದರೆ ಅವರು ಜಲ್ಸವನ್ನು ಬಹಳ ಸುವ್ಯವಸ್ಥಿತವಾಗಿ ಜರಗುವಂತೆ ಮಾಡುತ್ತಾರೆ. ಈ ಜಲ್ಸ ಇಷ್ಟು ಸುವ್ಯವಸ್ಥಿತವಾಗಿ ಜರಗಲು ಕಾರಣ ಸ್ವಯಂ ಸೇವಕರ ಬಳಲಿಕೆಯಿಲ್ಲದ ದುಡಿಮೆಯ ಫಲಸ್ವರೂಪವಾಗಿದೆ ಎಂದು ಹೇಳಿದರು. ಈ ರೀತಿ ಸ್ವಯಂಸೇವಕರಾದ ಕಾರ್ಯಕರ್ತರು ಅನ್ಯರ ಮೇಲೆ ಬಹಳ ಪ್ರಭಾವ ಬೀರುತ್ತಾರೆ. ಈ ಕಾರಣದಿಂದ ನಾವು ಎಲ್ಲ ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸಬೇಕಾಗಿದೆ. ಅವರು ನಿಸ್ವಾರ್ಥವಾಗಿ ಅತಿಥಿಗಳಿಗೆ ಸೇವೆ ಸಲ್ಲಿಸುತ್ತಾ ಇರುವಾಗ ಅವರು ಮೌನವನ್ನವಲಂಬಿಸಿದ ಮುಬಲ್ಲಿಗರಾಗಿ ಅಹ್ಮದಿಯಾ ಜಮಾಅತಿನ ಸಂದೇಶ ತಲಪಿಸುತ್ತಾ ಇರುತ್ತಾರೆ. ಅಲ್ಲಾಹನು ಈ ಎಲ್ಲ ಕಾರ್ಯಕರ್ತರ ಸೇವಾ ಮನೋಭಾವವನ್ನು ಯಾವಾಗಲೂ ವರ್ಧಿಸುತ್ತಾ ಇರಲಿ ಮತ್ತು ಅವರಿಗೆ ಈ ಸೇವೆಗೋಸ್ಕರ ಅತ್ಯುತ್ತಮ ಪ್ರತಿಫಲ ನೀಡಲಿ.

ಇದೇ ರೀತಿ ಎಂ.ಟಿ.ಎ.ದ ಕಾರ್ಯಕರ್ತರಿದ್ದಾರೆ. ಲೋಕದಲ್ಲಿರುವ ಎಲ್ಲ ಅಹ್ಮದಿಯರು ಅವರಿಗೆ ಕೃತಜ್ಞತೆ

ಅರ್ಪಿಸಬೇಕಾಗಿದೆ. ಅವರು ಶಕ್ತಿಮೀರಿ ಪ್ರಯತ್ನಿಸಿ ಜಲ್ಸದ ಮೂರು ದಿನಗಳ ಕಾರ್ಯಕ್ರಮಗಳನ್ನೂ ನೇರ ಪ್ರಸಾರ ಮಾಡುವ ವ್ಯವಸ್ಥೆ ಮಾಡಿದರು. ಎಲ್ಲ ವಿಭಾಗದ ಕಾರ್ಯಕರ್ತರೂ ಅವರವರ ಕರ್ತವ್ಯಗಳನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ಅವರೆಲ್ಲರಿಗೂ ಜಮಾಅತ್ ಸದಸ್ಯರು ಆಭಾರಿಯಾಗಿದ್ದಾರೆ. ಅದೇ ರೀತಿ ಕಾರ್ಯಕರ್ತರು ಸಹ ತಮಗೆ ಅಲ್ಲಾಹನು ಸೇವೆ ಮಾಡಲು ಭಾಗ್ಯ ನೀಡಿದುದಕ್ಕೆ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅಲ್ಲಾಹನು ಹೇಳುತ್ತಾನೆ: ನೀವು ಕೃತಜ್ಞತೆ ಅರ್ಪಿಸುವವರಾದರೆ ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ಅವನು ವರ್ಧಿಸುವನೆಂದು ಮತ್ತು ತನ್ನ ಇತರ ಅನುಗ್ರಹಗಳನ್ನು ನೀಡುವನೆಂದು. ಅಲ್ಲಾಹನು **ಅಝೀದನ್ನಕುಮ್** (ನಾನು ನಿಮಗೆ ವರ್ಧಿಸಿ ಕೊಡುವೆನು) ಎಂದು ಹೇಳುವಾಗ ಯಾವುದಕ್ಕೂ ಮಿತಿಯೇನೂ ಇರುವುದಿಲ್ಲ. ಅಲ್ಲಾಹನು ಅನುಗ್ರಹ ನೀಡುವಾಗ ಅಸಂಖ್ಯಾತವಾಗಿ ನೀಡುತ್ತಾನೆ. ಪ್ರತಿಯೊಂದರಲ್ಲಿ ಅನುಗ್ರಹ ನೀಡುತ್ತಾನೆ. ಸತ್ಯ ವಿಶ್ವಾಸಿಯು ಹೇಗೆ ವರ್ತಿಸಬೇಕೆಂದರೆ ಪ್ರತಿಯೊಂದು ಜಯ ದೊರೆತಾಗ ಮತ್ತು ಪ್ರತಿಯೊಂದು ಒಳ್ಳೆಯ ಸಂದರ್ಭದಲ್ಲಿ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವನಾಗಬೇಕು. ತನ್ನಲ್ಲಿ ಏನಾದರೂ ಬಲಹೀನತೆ ಕಂಡಾಗ ಅಲ್ಲಾಹನಿಂದ ಕರುಣೆಯನ್ನು ಬೇಡಿಕೊಳ್ಳಬೇಕು ಮತ್ತು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡಬೇಕು.

ಈಗ ನಾನು ಅತಿಥಿಗಳ ಕೆಲವು ಅಭಿಪ್ರಾಯಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಮೊದಲು ಸಿರಿಯಾದ ನಮ್ಮ ಕೆಲವು ಅರಬಿ ಮಿತ್ರರ ಅಭಿಪ್ರಾಯಗಳನ್ನು ವಿವರಿಸುವೆನು. ಒಬ್ಬ ಅಹ್ಮದಿ ಅಹ್ಮದ್ ದರ್‌ವೇಶ್ ಸಾಹಿಬ್ ಹೇಳುತ್ತಾರೆ: ಇದು ನಾನು ಭಾಗವಹಿಸಿದ ಪ್ರಥಮ ಜಲ್ಸವಾಗಿದೆ. ನಾನು ಜಲ್ಸಗಾಹ್‌ದಲ್ಲಿ ಪ್ರವೇಶಿಸಿದಾಗ ಖಲೀಫರನ್ನು ಅಲ್ಲಿರುವುದಾಗಿ ಕಂಡೆನು. ಆಗ ನಾನು ಇಸ್ಲಾಮಿಗೆ ಪ್ರವೇಶಿಸಿದ ಹಾಗೆ ಭಾವಿಸಿದೆ. ನನ್ನ ಜೀವಿತದಲ್ಲಿ ಬಹಳ ದೊಡ್ಡ ಬದಲಾವಣೆ ಆಗಿದೆ. ನನ್ನ ನಮಾಝ್, ಭಯ ಭಕ್ತಿಭರಿತ ಮತ್ತು ಹೃದಯಪೂರ್ವಕವಾಗಿ ನಿರ್ವಹಿಸಿದೆ ಎಂದು ಹೇಳಿದರು. ಪ್ರತಿಯೊಬ್ಬ ಅಹ್ಮದಿ ಜಲ್ಸದಲ್ಲಿ ಭಾಗವಹಿಸುವಾಗ ಇಂತಹ ಬದಲಾವಣೆ ಉಂಟಾಗಬೇಕು. ಕೇವಲ ಕೆಲವು ದಿನಗಳಿಗಲ್ಲ. ಸ್ಥಿರವಾದ ಬದಲಾವಣೆ ಉಂಟಾಗಬೇಕು.

ಇನ್ನೊಬ್ಬ ಸಿರಿಯನ್ ಅಹ್ಮದಿ ಅಲ್‌ಹಾಜ್ ಅಬ್ದುಲ್ಲಾ ಸಾಹಿಬ್ ಹೇಳುತ್ತಾರೆ: ಜಲ್ಸ ಸಾಲಾನದ ಮೂರು ದಿನಗಳು ಹೇಗಿದ್ದುವು ಎಂದರೆ ನನ್ನ ಆಯುಷ್ಕಾಲದಲ್ಲಿ ಅದನ್ನು ಮರೆಯಲು ಸಾಧ್ಯವಿಲ್ಲ. ಲೋಕದಲ್ಲಿ ಎಲ್ಲದಕ್ಕಿಂತಲೂ ಉನ್ನತ ಸ್ಥಾನದಲ್ಲಿರುವ ಜಮಾಅತಿನ ಸಾವಿರಗಟ್ಟಲೆ ಜನರು ಕೆನಡದಲ್ಲಿ ಈ ಸಂದರ್ಭದಲ್ಲಿ ಅತ್ಯಂತ ಉತ್ತಮ ವ್ಯವಸ್ಥೆಯೊಂದಿಗೆ ಜಮಾಯಿಸಿದ್ದರು. ಸುವ್ಯವಸ್ಥೆ, ಸ್ವಾಗತ ವ್ಯವಸ್ಥೆ, ಆವಶ್ಯಕ ವಸ್ತುಗಳ ಪೂರೈಕೆ ಇಲ್ಲಿ ಇತ್ತು. ಚಿಕ್ಕ ಮಕ್ಕಳ ಆಟೋಟಗಳನ್ನು ಗಮನಿಸಿ ಅದರ ಬಗ್ಗೆ ಸಹ ವ್ಯವಸ್ಥೆ ಮಾಡಲಾಗಿತ್ತು. ಎಲ್ಲ ವ್ಯವಸ್ಥೆಗಳೂ ಅಸಾಧಾರಣವಾಗಿತ್ತು. ಜಲ್ಸದ ಪರಿಸರ ಪ್ರೀತಿ ಮತ್ತು ಭ್ರಾತೃತ್ವದ ಭಾವನೆಗಳಿಂದ ತುಂಬಿತ್ತು. ಸಾವಿರಾರು ಜನರನ್ನು ಆಮಂತ್ರಿಸಿ ಅವರ ಸಂಚಾರ ಮತ್ತು ವಾಸ್ತವ್ಯದ ಮತ್ತು ಆಹಾರದ ವ್ಯವಸ್ಥೆ ಮಾಡುವುದು ಅಸಾಧಾರಣವಾದ ಕೆಲಸವಾಗಿದೆ. ಭಾಷಣಗಳು ಮತ್ತು ಅವುಗಳ ಭಾಷಾಂತರ ಉತ್ತಮವಾಗಿತ್ತು. ನಾನು ಜರ್ನಲಿಸ್ಟರ ಒಂದು ಟೀಮಿಗೆ ಮತ್ತು ಒಂದು ಮುಸ್ಲಿಮ್ ಕುಟುಂಬಕ್ಕೆ ಆಮಂತ್ರಣ ನೀಡಿದ್ದೆ. ಅವರು ಜಲ್ಸದ ಅತ್ಯುತ್ತಮ ವ್ಯವಸ್ಥೆಯನ್ನು ಕಂಡು ಆಶ್ಚರ್ಯಗೊಂಡರು ಎಂದು ಹೇಳಿದರು.

ಜಲ್ಸದಲ್ಲಿ ಮೂರನೆಯ ದಿನ ನಾನು ಮಾಡಿದ ಭಾಷಣವನ್ನು ಅವರು ಬಹಳ ಮೆಚ್ಚಿದರು. ಅವರು ಹೇಳಿದರು: ಅಹ್ಮದಿಯರಿಗೆ ತಮ್ಮ ಇಮಾಮರ ಬಗ್ಗೆ ಇರುವ ಪ್ರೀತಿ ಅತಿಥಿಗಳಿಗೆ ಆಶ್ಚರ್ಯಕರವಾಗಿತ್ತು.

ಅಬ್ದುಲ್ ಖಾದಿರ್ ಸಾಹೇಬ್ ಹೇಳುತ್ತಾರೆ: ಜಲ್ಸದಲ್ಲಿ ಎಂತಹ ದೊಡ್ಡ ಕೆಲಸ ನಡೆಯುತ್ತದೆ ಎಂದು ನಾನು ಮೊದಲನೆಯ ಬಾರಿ ಕಂಡೆನು. ಪ್ರತಿಯೊಂದು ವಿಭಾಗದ ಕಾರ್ಯಕರ್ತರು ಜೇನುನೊಣಗಳ ಹಾಗೆ ಮೌನವಾಗಿ ಮತ್ತು ಯಾರಿಗೂ ತೊಂದರೆ ನೀಡದೆ ಕೆಲಸ ಮಾಡುತ್ತಾ ಇರುತ್ತಾರೆ. ಸೇವೆ ಮಾಡಲು ತನಗೆ ಸಂದರ್ಭ ಸಿಗಲಿ ಎಂದು ಪ್ರತಿಯೊಬ್ಬನು ಇಚ್ಛಿಸುತ್ತಿದ್ದನು. ವಿಶಿಷ್ಟವಾಗಿ ನಾನು ಅರಬಿ ಎಂದು ತಿಳಿದಾಗ ನನ್ನೊಂದಿಗೆ ಅಸಾಧಾರಣ ಗೌರವದಿಂದ ವರ್ತಿಸುತ್ತಿದ್ದರು.

ಸಲ್ಮಾ ಜಬೂಲಿ ಸಾಹೇಬ ಹೇಳುತ್ತಾರೆ: ಜಲ್ಸದ ಶಿಸ್ತು ಮತ್ತು ವ್ಯವಸ್ಥೆ ನೋಡುವಾಗ ಜಮಾಅತ್ ಒಂದು ಶರೀರದ ಹಾಗೆ ಐಕ್ಯತೆ ಮತ್ತು ಒಬ್ಬರಿನ್ನೊಬ್ಬರ ಸಹಾಯದೊಂದಿಗೆ ಕೆಲಸ ಮಾಡುವುದಾಗಿ ಕಾಣಿಸುತ್ತದೆ. ಜಲ್ಸದಲ್ಲಿ ಭಾಗವಹಿಸಿದ ವಿವಿಧ ದೇಶಗಳು, ವಿವಿಧ ವರ್ಣಗಳ ಜನರು ಒಗ್ಗೂಡಿ ಒಂದು ಉದ್ದೇಶಕ್ಕೋಸ್ಕರ ಕೆಲಸ ಮಾಡುತ್ತಿರುವುದಾಗಿ ಕಂಡು ಬಂತು. ಇಸ್ಲಾಮ್ ಮತ್ತು ಶಾಂತಿಯ ಸಂದೇಶ ಲೋಕಕ್ಕೆ ತಲಪಿಸುವುದೇ ಆ ಉದ್ದೇಶವಾಗಿದೆ ಎಂದು ಹೇಳಿದರು.

ಈಗ ನಾನು ಹೇಳಿರುವುದು ಕೆಲವು ಅಹ್ಮದಿಯರ ಅಭಿಪ್ರಾಯಗಳನ್ನಾಗಿದೆ. ಇನ್ನು ಮುಂದೆ ಕೆಲವು ಅಹ್ಮದಿಯೇತರರ ಅಭಿಪ್ರಾಯಗಳನ್ನು ವಿವರಿಸುವೆನು. ಜಲ್ಸಕ್ಕೆ ಆಗಮಿಸಿದ ಜರ್ಮನಿಯ ಕೌನ್ಸಿಲೇಟ್ ಹೇಳಿದರು: ಸಮಾರೋಪ ಭಾಷಣದಲ್ಲಿ ಖಲೀಫರು ನೈಜ ಇಸ್ಲಾಮೀ ತತ್ವಗಳನ್ನು ವಿವರಿಸಿದರು. ಅದು ಶಾಂತಿ, ನ್ಯಾಯ ಮತ್ತು ಪ್ರೀತಿಯ ಉಪದೇಶ ನೀಡುತ್ತದೆ. ಪ್ರತಿಯೊಂದು ಶಬ್ದದಲ್ಲಿ ವಾಸ್ತವಿಕತೆ ಇದೆ. ಲೋಕದ ಮಾಧ್ಯಮಗಳು ಇರಾಕಿನ ಬಗ್‌ದಾದಿ ಬಗ್ಗೆ ಮತ್ತು ಐಸಿಸ್ ಬಗ್ಗೆ ನೀಡುವ ಪ್ರಚಾರಕ್ಕಿಂತ ಈ ಶಾಂತಿಯ ರಾಯಭಾರಿಗೆ ಪ್ರಚಾರ ನೀಡುತ್ತಿದ್ದರೆ ಲೋಕದಲ್ಲಿ ವಾಸ್ತವಿಕ ಶಾಂತಿ ನೆಲೆ ನಿಲ್ಲಲು ಸಹಾಯಕವಾಗುತ್ತಿತ್ತು. ಖಲೀಫರ ಪ್ರತಿಯೊಂದು ಮಾತು ಸತ್ಯವಾಗಿತ್ತು. ಲೋಕದಲ್ಲಿ ಶಾಂತಿ ಸ್ಥಾಪನೆ ಬಗ್ಗೆ ಅವರು ನೋವನ್ನು ಪ್ರಕಟಪಡಿಸುತ್ತಿದ್ದರು. ನನಗೆ ಸಾಧ್ಯವಿರುವಷ್ಟು ಮಟ್ಟಿಗೆ ಈ ಸಂದೇಶವನ್ನು ನಾನು ಹರಡುವೆನು.

ಜಲ್ಸದಲ್ಲಿ ಭಾಗವಹಿಸಿದ ಓರ್ವ ಕ್ರೈಸ್ತ ಅತಿಥಿ ಈ ರೀತಿ ಹೇಳಿದರು: ಈ ದಿನ ನನಗೆ ಬಹಳ ಸಂತೋಷವಾಗಿದೆ. ಖಲೀಫತುಲ್ ಮಸೀಹರು ತನ್ನ ಭಾಷಣದಲ್ಲಿ ಶಾಂತಿ ಮತ್ತು ಸುರಕ್ಷೆ ಬಗ್ಗೆ ಹೇಳಿದರು. ಅಹ್ಮದಿಯಾ ಜಮಾಅತನ್ನು ಜನರು ಪರಿಚಯ ಮಾಡಿಕೊಳ್ಳುವುದು ಈಗ ಆವಶ್ಯಕವಾಗಿದೆ. ಅಹ್ಮದಿಯಾ ಜಮಾಅತ್ ಮಾಡುವ ಕೆಲಸದ ಬಗ್ಗೆ ಜನರಿಗೆ ತಿಳಿಯಬೇಕು. ಮಾಧ್ಯಮದವರು ಜನರಿಗೆ ಪರಿಚಯ ಮಾಡಿಕೊಡುವವರು ನಿಜವಾದ ಮುಸ್ಲಿಮರಲ್ಲ, ವಾಸ್ತವದಲ್ಲಿ ಇಸ್ಲಾಮಿನ ನೈಜ ತತ್ವಗಳು ಶಾಂತಿ ಭರಿತವಾಗಿವೆ.

ಬೇಲೀಸ್‌ನಿಂದ ಆಗಮಿಸಿದ ಅಲ್ಲಿನ ಮೇಯರ್, ಅವರು ಯು.ಕೆ.ಗೂ ಆಗಮಿಸಿದ್ದರು, ಅವರು ಹೇಳುತ್ತಾರೆ: ಖಲೀಫರ ಭಾಷಣ ನನ್ನ ಮೇಲೆ ಬಹಳ ಪ್ರಭಾವ ಬೀರಿತು. ಖಲೀಫರು ಅಂತರಾಷ್ಟ್ರೀಯ ವಿಷಯಗಳ ಮೇಲೆ ಬೆಳಕು ಬೀರಿದುದನ್ನು ಕಾಣುವಾಗ, ಖಲೀಫರು ಕೇವಲ ಅಹ್ಮದಿಯರಿಗೆ ಮಾತ್ರ

ಮಾರ್ಗದರ್ಶನ ನೀಡುವವರಲ್ಲ, ಲೋಕಕ್ಕೆಲ್ಲಾ ಮಾರ್ಗದರ್ಶನ ನೀಡುವವರು ಆಗಬಲ್ಲರು ಎಂದು ನನಗೆ ಭಾಸವಾಯಿತು. ಖಲೀಫತುಲ್ ಮಸೀಹ್ ತನ್ನ ಭಾಷಣದಲ್ಲಿ ವಿವರಿಸಿದವುಗಳನ್ನು ನಾನು ಎಂದೂ ಮರೆತುಬಿಡಲಾರೆ.

ಬರ್‌ಹಮ್‌ಟನ್‌ನಿಂದ ಆಗಮಿಸಿದ ಒಬ್ಬ ಅತಿಥಿ ಹೇಳುತ್ತಾರೆ: ಜಲ್ಸದಲ್ಲಿ ನನಗೆ ಒಂದೇ ಒಂದು ಸಂದೇಶ ಲಭಿಸಿದೆ. ಅದು ಶಾಂತಿ ಸ್ಥಾಪಿಸಲ್ಪಡಬೇಕು ಎಂಬ ಸಂದೇಶವಾಗಿದೆ. ನನ್ನ ಸಮಾರೋಪ ಭಾಷಣ ಆಲಿಸಿ ಇನ್ನೊಬ್ಬ ಅತಿಥಿ ಹೇಳಿದರು: ಆ ಭಾಷಣ ಅದ್ಭುತಕರವಾಗಿತ್ತು. ಅದರ ಬಗ್ಗೆ ನನ್ನ ಭಾವನೆಗಳನ್ನು ವಿವರಿಸಲು ಶಬ್ದಗಳು ದೊರಕುವುದಿಲ್ಲ. ಮತ್ತೊಬ್ಬ ಮಹಿಳೆ, ಪಾರ್ಲಿಮೆಂಟ್ ಸದಸ್ಯೆ, ಯಾಸ್‌ಮೀನ್ ಅತೆನ್‌ಸಿ ಸಾಹಿಬ ಹೇಳುತ್ತಾರೆ: ಖಲೀಫರು ಮಹಿಳೆಯರನ್ನು ಸಂಬೋಧಿಸಿ ಮಾಡಿದ ಭಾಷಣ ಬಹಳ ಉತ್ತಮವಾಗಿತ್ತು. ಓರ್ವ ಮಾತೆ ತನ್ನ ಕುಟುಂಬದ ಅಸ್ತಿಭಾರವಾಗಿರುತ್ತಾಳೆ ಮತ್ತು ಸಮಾಜವನ್ನು ಬಲಪಡಿಸುತ್ತಾಳೆ ಎಂಬ ಮಾತು ವಿಶಿಷ್ಟವಾಗಿ ನನಗೆ ಇಷ್ಟಕರವಾಯಿತು.

ಜಲ್ಸಕ್ಕೆ ಆಗಮಿಸುವ ಅತಿಥಿಗಳು ಅಲ್ಲಾಹನ ಅನುಗ್ರಹದಿಂದ ಉತ್ತಮವಾಗಿ ಪ್ರಭಾವಿತರಾಗುತ್ತಾರೆ. ಜಲ್ಸ ಸಾಲಾನ ನಮ್ಮವರು ಆಧ್ಯಾತ್ಮಿಕವಾಗಿ ಉತ್ತಮಗೊಳ್ಳಲು ಮಾರ್ಗವಾಗುತ್ತದೆಯಲ್ಲದೆ ಅನ್ಯರು ಜಮಾಅತಿನ ಬಗ್ಗೆ ಪರಿಚಯ ಮತ್ತು ಸಂಬಂಧ ಸ್ಥಾಪಿಸಲು ಮಾರ್ಗವಾಗುತ್ತದೆ. ಲೋಕಕ್ಕೆ ಇಸ್ಲಾಮಿನ ವಾಸ್ತವಿಕ ಚಿತ್ರದ ಪರಿಚಯವಾಗುತ್ತದೆ. ಕಳೆದ ಕೆಲವು ಕಾಲದಿಂದ ಮುಸ್ಲಿಮ್ ದೇಶಗಳ ಅವಸ್ಥೆ ಮತ್ತು ಅದರ ಕಾರಣದಿಂದ ನಮ್ಮ ಮುಂದೆ ಬರುತ್ತಿರುವ ಲೋಕದ ಸ್ಥಿತಿಯ ಕಾರಣ ಮಾಧ್ಯಮದ ದೃಷ್ಟಿ ಈಗ ನಮ್ಮ ಜಮಾಅತಿನ ಕಡೆಗೆ ತಿರುಗುತ್ತದೆ. ಜನರ ಲಕ್ಷ್ಯ ನಮ್ಮ ಕಡೆಗೆ ತಿರುಗುವಂತಾದುದು ಅಲ್ಲಾಹನ ಅನುಗ್ರಹವಾಗಿದೆ. ಏಕೆಂದರೆ ಮೊದಲು ನಾವು ಕರೆದರೂ ಈ ಜನರು ಬರುತ್ತಿರಲಿಲ್ಲ. ಅನಂತರ ನಮ್ಮ ಯುವಜನರು ಮಾಡಿದ ಕೆಲಸ ಬಹಳ ದೊಡ್ಡದಾಗಿದೆ. ಅವರು ಮಾಧ್ಯಮದವರ ಜೊತೆ ಸಂಪರ್ಕ ಸ್ಥಾಪಿಸಿದರು. ಅಲ್ಲಾಹನ ಅನುಗ್ರಹದಿಂದ ಅದನ್ನು ಬಹಳ ವಿಶಾಲವಾಗಿ ಮಾಡಿದರು.

ಪತ್ರಿಕೆ, ರೇಡಿಯೋ, ಟಿ.ವಿ ಚ್ಯಾನಲ್‌ಗಳ ಕೆಲವರು ಜಲ್ಸದ ಮೊದಲನೆ ದಿನ ಎಂದರೆ ಶುಕ್ರವಾರ ಆಗಮಿಸಿದ್ದರು. ಒಂದು ಚಿಕ್ಕ ಪ್ರೆಸ್ ಕಾನ್‌ಫರೆನ್ಸ್ ಸಹ ಜರಗಿತು. ಅವರು ಸಂದರ್ಶನ ನಡೆಸಿದರು. ಅವುಗಳನ್ನು ಸಹ ಚೆನ್ನಾಗಿ ಬಿತ್ತರಿಸಲಾಯಿತು. ಜಮಾಅತಿನ ಪರಿಚಯ ಮಾಡಿಕೊಡಲಾಯಿತು. ಇಸ್ಲಾಮಿನ ವಾಸ್ತವಿಕ ಉಪದೇಶ ತಿಳಿಸಿಕೊಡಲಾಯಿತು. ನಾನು ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶ ತಲಪಿಸಿದೆ. ಇಂದಿನ ಕಾಲದ ಪರಿಸ್ಥಿತಿಯ ಚರ್ಚೆಯೊಂದಿಗೆ ಅಹ್ಮದಿಯಾ ಜಮಾಅತ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಮತ್ತು ಅವುಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಜೊತೆ ಜೋಡಿಸಿ ಇಸ್ಲಾಮಿನ ವಾಸ್ತವಿಕತೆ ಜನರಿಗೆ ತಿಳಿಸುವುದು ನನ್ನ ಪ್ರಯತ್ನವಾಗಿದೆ.

ಒಟ್ಟಿನಲ್ಲಿ ಮಾಧ್ಯಮಗಳು ಜಲ್ಸದ ಬಗ್ಗೆ ನೀಡಿದ ಪ್ರಚಾರದ ಸಂಕ್ಷಿಪ್ತ ವಿವರಣೆ ಏನೆಂದರೆ, ಕನಿಷ್ಠ ಪಕ್ಷ ಹತ್ತು ಮಿಲಿಯ ಜನರಿಗೆ ಅಹ್ಮದಿಯಾ ಜಮಾಅತಿನ ಪರಿಚಯವಾಗಿದೆ ಮತ್ತು ಸಂದೇಶ ತಲಪಿದೆ. ನಾನು ತಿಳಿದಷ್ಟರ ಮಟ್ಟಿಗೆ ಅವರು ಬಹಳ ಸತ್ಯವಾದ ಸಮಾಚಾರ ನಿಡಿದ್ದಾರೆ. ಜಮಾಅತಿನ ಮತ್ತು ಜಲ್ಸದ ಬಗ್ಗೆ, ನಮ್ಮ ಜಮಾಅತಿನ ತತ್ವಗಳ ಬಗ್ಗೆ ಸರಿಯಾದ ಸಮಾಚಾರ ನೀಡಿದ್ದಾರೆ.

ಇದು ಅಲ್ಲಾಹನು ಮಾಡುವ ಕೆಲಸವಾಗಿದೆ. ಜಮಾಅತಿನ ಬಗ್ಗೆ ಪರಿಚಯ ವರ್ಧಿಸುತ್ತಾ ಇದೆ. ಅದರೊಂದಿಗೆ ಅದು ನಮ್ಮ ಗಮನವನ್ನು ಸೆಳೆಯುತ್ತದೆ. ನಾವು ಕೇವಲ ಇವುಗಳಿಂದ ಸಂತೋಷಪಡಬಾರದು. ನಾವು ನಮ್ಮ ಆಧ್ಯಾತ್ಮಿಕ ಸ್ಥಿತಿ ಮತ್ತು ಅಲ್ಲಾಹನೊಂದಿಗೆ ಸಂಬಂಧವನ್ನು ವರ್ಧಿಸಬೇಕು. ಅಲ್ಲಾಹನು ಕೆಟ್ಟದೆಂದು ಹೇಳಿದುದನ್ನು ಕೆಟ್ಟದೆಂದು ನಾವು ತಿಳಿಯಬೇಕು. ಅಲ್ಲಾಹನು ಮಾಡಬೇಕೆಂದು ಆಜ್ಞಾಪಿಸಿದ ಕಾರ್ಯಗಳನ್ನು ಮಾಡಬೇಕು. ಅಲ್ಲಾಹನು ಸೇವೆ ಮಾಡುವ ಸಂದರ್ಭ ನೀಡಿದರೆ ಅದನ್ನು ಅಲ್ಲಾಹನ ಅನುಗ್ರಹ ಎಂದು ಭಾವಿಸಬೇಕು. ಎಲ್ಲಾ ಹುದ್ದೇದಾರರು ಮತ್ತು ಸೇವೆ ಮಾಡುವವರು ತಮ್ಮ ಹೊಣೆಗಾರಿಕೆಗಳನ್ನು ತಖ್ವದೊಂದಿಗೆ ಈಡೇರಿಸಲು ಪ್ರಯತ್ನಿಸಬೇಕು. ಜಲ್ಸದಲ್ಲಿ ಭಾಗವಹಿಸಿದವರು ಮತ್ತು ಆಲಿಸಿದವರು ತಮ್ಮನ್ನು ಪರಿಶೋಧಿಸಬೇಕು. ನಾವು ಜಲ್ಸದಲ್ಲಿ ಆಲಿಸಿದವುಗಳನ್ನು ನಮ್ಮಲ್ಲಿ ಅಳವಡಿಸಿರುವೆವೋ ಎಂದು. ನಮ್ಮ ಜೀವಿತದ ಭಾಗವಾಗಿ ಮಾಡಲು ಪ್ರಯತ್ನ ಮಾಡಿದ್ದೇವೆಯೋ ಎಂದು. ನಾವು ಯಾವಾಗಲೂ ಒಳ್ಳೆಯ ವಿಷಯಗಳನ್ನು ನಮ್ಮದನ್ನಾಗಿ ಮಾಡುವುದು ಹೇಗೆಂದು ಪರಿಶೋಧಿಸಬೇಕು. ಅದಕ್ಕೋಸ್ಕರ ಪ್ರಯತ್ನಿಸುತ್ತಿರಬೇಕು.

ಈ ಎಲ್ಲಾ ವಿಷಯಗಳನ್ನು ಅನುಷ್ಠಾನಕ್ಕೆ ತರಲು ಪ್ರತಿಯೊಬ್ಬ ಅಹ್ಮದಿಗೆ ಅಲ್ಲಾಹನು ಭಾಗ್ಯ ನೀಡಲಿ. ವಾಸ್ತವಿಕವಾಗಿ ಅಲ್ಲಾಹನನ್ನು ಗುರುತಿಸುವವರೂ ಮತ್ತು ಅವನೊಂದಿಗೆ ಸಂಬಂಧ ಬೆಳೆಸುವವರೂ ಆಗಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At, Baitul Islam Mosque, Toronto, Canada on 14-10-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon